ಮಾಡಿದಾಗ ಅವರು ಎಷ್ಟೇ ದೊಡ್ಡ ಅಧಿಕಾರಿಗಳಾಗಿದ್ದರು ಕ್ರಮ ತೆಗೆದು ಕೊಳ್ಳಲು ಹಿಂಜರಿಯುವು ದಿಲ್ಲವೆಂದು ಹೇಳಿದ್ದಾರೆ. ಗೃಹ ಸಚಿವರು ಕೊಡಗಿಗೆ ಬಂದಾಗ ಆ ವಿವರಗಳೆಲ್ಲವನ್ನು ಕೊಡಿ.

ಶ್ರೀ ಡಿ. ಎಸ್. ಮಾದಪ್ಪ : ಇದೇ ರೀತಿ ವೀರಾಜಪೇಟೆಯಲ್ಲಿ ಜೋಡಿ ಕೊಲೆ ಏನು ನಡೆಯಿತು ಅಲ್ಲಿಯೂ ಮುಗ್ಧರ ಮೇಲೆ ಸತ್ತವರ ಮೇಲೆ ಕೊಲೆ ಮೊಕದ್ದಮೆಯನ್ನು ಹಾಕಿದ್ದಾರೆ.

ಅಧ್ಯಕ್ಷರು : ಗೃಹ ಸಚಿವರು ಅಲ್ಲಿಗೆ ಬಂದಾಗ ಎಲ್ಲ ವಿಚಾರವನ್ನು ಅವರ ಗಮನಕ್ಕೆ ತನ್ನಿ.

ಶ್ರೀ ಹೆಚ್. ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಅವರು ಕಲ್ಯಾಣ ಮಂಟಪದ ವಿಚಾರವನ್ನು ಪ್ರಸ್ತಾಪ ಮಾಡಿದರು. ಆ ರೀತಿ ಕಲ್ಯಾಣ ಮಂಟಪವನ್ನು ಮಾಡುವ ಸಂದರ್ಭದಲ್ಲಿ ಅಕ್ರಮವಾಗಿ ಮತ್ತು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ವಂತಿಕೆ, ಇತರೆ ಸಾಮಗ್ರಿಗಳನ್ನು ವಸೂಲಿ ಮಾಡುತ್ತಿರುವುದು ನನ್ನ ಗಮನಕ್ಕೆ ಬಂತು. ಆ ರೀತಿ ವಸೂಲಿ ಮಾಡಿ ಕಲ್ಯಾಣ ಮಂಟಪ ಕಟ್ಟುತಕ್ಕ ಸಂದರ್ಭ ಇವತ್ತು ಬಂದಿಲ್ಲ. ಅವರು ಅಧಿಕಾರದ ದುರುಪಯೋಗ ಮಾಡಿದ್ದಾರೆ. ಅದಕ್ಕೆ ಪುರಾವೆಯೇನಾದರು ಬೇಕಾಗಿದ್ದರೆ ಈ ಸದನದ ಮೂಲಕ ಒದಗಿಸಲು ನಾನು ಸಿದ್ಧನಾಗಿರುವೆ. ದಯವಿಟ್ಟು ಆ ಅಧಿಕಾರಿಯ ಮೇಲೆ ಕ್ರಮ ಜರುಗಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಮಾದಪ್ಪನವರು ಮತ್ತು ಬಸವರಾಜ್‌ರವರು ಕೊಡಗು ಜಿಲ್ಲೆಯ ಪೋಲಿಸರ ಬಗ್ಗೆ ಹೇಳಿರುವ ವಿಚಾರಗಳು ಸೂಕ್ಷ್ಮವಾಗಿವೆ. ಕೊಡಗು ಜಿಲ್ಲೆಯ ಕಾನೂನಿಗೆ ಸಂಬಂಧಪಟ್ಟಂತೆ ಅನೇಕ ಸಮಸ್ಯೆಗಳು ಇದೆ. ತಾವು ಹೇಳಿರುವ ವಿಚಾರಗಳಲ್ಲಿ ಅನೇಕ ವಿಚಾರಗಳು ಸೂಕ್ಷ್ಮತೆಯನ್ನು ಹೊಂದಿವೆ. ಬೇಕಾದರೆ ಅದನ್ನು ತಮ್ಮಗಮನಕ್ಕೆ ಪ್ರತ್ಯೇಕವಾಗಿ ತರುತ್ತೇನೆ. ನಾನು ಯಾವುದೇ ಅಧಿಕಾರಿಗೂ ರಕ್ಷಣೆ ಮಾಡಲು ಹೋಗುವುದಿಲ್ಲ.

ಶ್ರೀ ಡಿ. ಎಸ್. ಮಾದಪ್ಪ : ನನ್ನ ಮನೆ ಮೇಲೆ ನಡೆದ ದಾಳಿಯ ಬಗ್ಗೆ ಸಿ. ಒ. ಡಿ. ತನಿಖೆ ನೇಮಕ ಮಾಡಿ ಐದು ತಿಂಗಳುಗಳಾಯಿತು. ಅದರ ಬಗ್ಗೆ ದಯಮಾಡಿ ಹೇಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ : ನನ್ನ ಮನೆಯ ಮೇಲೆ ಗುಂಡು ಹಾರಿಸಿರುವವರನ್ನು ಅರೆಸ್ಟ್ ಮಾಡಿಲ್ಲವೆಂದು ಸದಸ್ಯರು ಹೇಳಿದ್ದಾರೆ. ಆದರೆ ಅದು ಸರಿಯಲ್ಲ. ಯಾರು ಗುಂಡನ್ನು ಹಾರಿಸಿದ್ದಾರೆ ಅವರಲ್ಲಿ ಕೆಲವರನ್ನು ಈಗಾಗಲೇ ಅರೆಸ್ಟ್ ಮಾಡಿ ಕ್ರಮ ತೆಗೆದುಕೊಂಡಿದ್ದಾರೆ. ಸಿ. ಒ. ಡಿ. ಯು ಡಿ. ಜಿ. ಪಿ. ಮತ್ತು ಅಧಿಕಾರಿಗಳಿಗೆ ಇದರ ಬಗ್ಗೆ ಕರೆದು ಸ್ವತಃ ಸೂಚನೆ ಕೊಟ್ಟಿದ್ದೇನೆ. ಆದಷ್ಟು ಬೇಗ ಇಂಥ ಸೂಕ್ಷ್ಮವಾದ ವಿಚಾರಗಳ ಬಗ್ಗೆ ಎಕ್ಸ್‌ಪಿಡಿಯೇಟ್ ಮಾಡಬೇಕೆಂದು ಹೇಳಬಹುದೆ ಹೊರತು ಮೆರಿಟ್ ಆಫ್ ದಿ ಕೇಸ್‌ನಲ್ಲಿ ಗೃಹ ಸಚಿವನಾಗಿ ನಾನು ಮಧ್ಯ ಪ್ರವೇಶ ಮಾಡಲು ಅವಕಾಶವಿಲ್ಲ. Let us leave it at that stage..

(ಒ) ಕರಾವಳಿ ಮೀನುಗಾರರ ಯಾಂತ್ರೀಕೃತ ದೋಣಿಗಳ ಡೀಸಲ್‌ಗೆ ತೆರಿಗೆ ವಿನಾಯಿತಿ.

ಶ್ರೀ ಎನ್ ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, 1999-2000ರ ಬಜೆಟ್‌ನಲ್ಲಿ ಕರಾವಳಿ ಮೀನುಗಾರರ ಯಾಂತ್ರೀಕೃತ ದೋಣಿಗಳಿಗೆ ಉಪಯೋಗ ಮಾಡುವ ಡೀಸೆಲ್‌ಗೆ ತೆರಿಗೆ ವಿನಾಯಿತಿಯ ಬಗ್ಗೆ ಘೋಷಣೆ ಮಾಡಲಾಗಿತ್ತು. ಆದರೆ ನಿನ್ನೆಯ ಪತ್ರಿಕೆಯಲ್ಲಿ ಕೇವಲ ಮೂವತ್ತು

ಸಾವಿರ ಲೀಟರ್‌ವರೆಗೆ ಮಾತ್ರ ಆ ವಿನಾಯಿತಿ ಇರುತ್ತದೆಂದು ಪ್ರಕಟಣೆ ಇದೆ. ಆದರೆ ಒಂದು ತಿಂಗಳಿಗೆ ಒಂದು ದೋಣಿಗೆ 45 ರಿಂದ 50 ಸಾವಿರ ಲೀಟರ್ ಡೀಸೆಲ್ ಉಪಯೋಗವಾಗುತ್ತದೆ. ಆದ್ದರಿಂದ ಮೀನುಗಾರರಿಗೆ ಇದರಿಂದ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಇದರ ಜೊತೆಗೆ ಮೀನನ್ನು ಒಣಗಿಸುವ ಜಾಗವೇನಿದೆ ಅದಕ್ಕೆ ಹತ್ತರಷ್ಟು ನೆಲಬಾಡಿಗೆಯನ್ನು ಏರಿಸಿದರೆ ಬಹಳ ತೊಂದರೆಯಾಗುತ್ತದೆ, ಆದ್ದರಿಂದ ಮತ್ಸ್ಯಕ್ಷಾಮದಿಂದ ಬಳಲುತ್ತಿರುವ ಮೀನುಗಾರರ ಕ್ಷೇಮಕ್ಕೋಸ್ಕರ ತಾವು ಖಂಡಿತವಾಗಿ ಹಿಂದಿನ ಬಾಡಿಗೆಯನ್ನು ನಿಗದಿ ಪಡಿಸಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ ಹೆಗಡೆ (ಬಂದರು ಮತ್ತು ಮೀನುಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದು ಸತ್ಯ. ಪತ್ರಿಕೆಯಲ್ಲಿ ಪ್ರಕಟವಾಗುವಾಗ ಅದು ತಪ್ಪಾಗಿ ಬಂದಿದೆ. ಹತ್ತು ಸಾವಿರ ಕಿಲೋಲೀಟರ್ ಎಂದು ಬರಬೇಕಾಗಿತ್ತು ಆದರೆ ಅದು ಮೂವತ್ತು ಸಾವಿರ ಲೀಟರ್ ಎಂದು ಬಂದಿದೆ. ಇದರ ಬಗ್ಗೆ ನಿನ್ನೆ ಹಣಕಾಸು ಸಚಿವರ ಜೊತೆ ಚರ್ಚೆ ಮಾಡಿದೆ. ಆಗ ಅವರು ಮೂವತ್ತು ಸಾವಿರ ಲೀಟರ್‌ಗೆ ಮಾತ್ರವಲ್ಲ ಮೀನುಗಾರರು ಉಪಯೋಗ ಮಾಡುವ ಡೀಸೆಲ್‌ಗೆ ಪೂರ್ಣವಾಗಿ ಮಾರಾಟ ತೆರಿಗೆ ವಿನಾಯಿತಿ ಕೊಡುವುದಾಗಿ ಹೇಳಿದ್ದಾರೆ. ಆದರೆ ಆ ರೀತಿ ವಿನಾಯಿತಿ ಕೊಡುವಾಗ ಅದರ ದುರುಪಯೋಗವಾಗದಂತೆ ನಾವು ಕ್ರಮ ತೆಗೆದುಕೊಳ್ಳಬೇಕಾಗಿದೆ. ಅದಕ್ಕೆ ಮೀನುಗಾರರು ಸಹಕಾರವನ್ನು ಕೊಡಬೇಕು. ಇನ್ನು ಮೀನನ್ನು ಒಣಗಿಸುವ ನೆಲದ ಬಾಡಿಗೆಯ ಬಗ್ಗೆ ಹೇಳುವುದಾದರೆ, ಅಧಿಕಾರಿಗಳೇನು ಪೆನಾಲ್ಟಿಯನ್ನು ಹಾಕಿದ್ದಾರೆ ಅದನ್ನು ವಸೂಲಿ ಮಾಡಬಾರದೆಂದು ಸೂಚನೆ ಕೊಟ್ಟಿದ್ದೇನೆ. ಮೀನುಗಾರರ ಮಟ್ಟಿಗೆ ನೆಲಬಾಡಿಗೆಯನ್ನು ಕಡಿಮೆ ಮಾಡುವ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ.

(ಓ) ಕೃಷ್ಣಮೇಲ್ದಂಡೆ ಯೋಜನೆಯಲ್ಲಿ ಮಳುಗಡೆಯಾದ ಅನೇಕ ಗ್ರಾಮೀಣ ಭಾಗದ ದೇವಸ್ಥಾನಗಳ ಕುರಿತು

ಶ್ರೀ ಪ್ರಹ್ಲಾದ್ ಹನುಮಂತಪ್ಪ ಪೂಜಾರ್ (ಬಾಗಲಕೋಟೆ) : ಮಾನ್ಯ ಅಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾಗತಕ್ಕಂಥ ಅನೇಕ ಗ್ರಾಮೀಣ ಭಾಗದ ದೇವಸ್ಥಾನದ ಬಗ್ಗೆ ವಿಷಯ ಮಂಡನೆ ಮಾಡಲು ಇಚ್ಛೆಪಡುತ್ತಿದ್ದೇನೆ. ಕೃಷ್ಣಾ ಕೊಳ್ಳದ ಯೋಜನೆಯಿಂದ ಅಲ್ಲಿ ಬರುವ ಐತಿಹಾಸಿಕ, ಧಾರ್ಮಿಕ ಸಾಂಸ್ಕೃತಿಕ ಮಹತ್ವ ಪಡೆದಿರುವ ಕೇಂದ್ರಗಳು ಅನಿವಾರ್ಯವಾಗಿ ನೀರಿನ ಪಾಲಾಗುವುದನ್ನು ನಾವುಗಳು ತಪ್ಪಿಸಲು ಸಾಧ್ಯವಾಗುವುದಿಲ್ಲ. ಜಗಜ್ಯೋತಿ ಬಸವೇಶ್ವರ ಐಕ್ಯ ಕೇಂದ್ರವಾದ ಕೂಡಲಸಂಗಮ ಮಂಟಪದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಅವರ ಸಚಿವಸಂಪುಟದ ಸಹೋದ್ಯೋಗಿಗಳಾದ ಎಂ. ಪಿ. ಪ್ರಕಾಶ್‌ರವರು, ಕೆ. ಎನ್. ನಾಗೇಗೌಡರು ಎಲ್ಲರೂ ಬಂದು ಆ ಐಕ್ಯ ಕೇಂದ್ರದ ರಕ್ಷಣೆ ಕುರಿತಂತೆ ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾನು ಆ ಭಾಗದ ಜನಪ್ರತಿನಿಧಿಯಾಗಿ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಕೂಡಲಸಂಗಮದ ಬಗ್ಗೆ ಸರ್ಕಾರವೇನು ಕಳಕಳಿಯಿಂದ ಕೆಲಸ ಮಾಡುತ್ತಿದೆ.

7.50 ಪಿ. ಎಂ.

ಆದರೆ ಗ್ರಾಮೀಣ ಭಾಗದಲ್ಲಿ ಇಂತಹ ಮಹತ್ವ ಪಡೆದಂತಹ ಅನೇಕ ಧಾರ್ಮಿಕ ಕೇಂದ್ರಗಳು, ಮಠ, ಮಂದಿರಗಳೂ ಕೂಡ ಇವತ್ತು ಮುಳುಗಡೆಯಾಗುತ್ತಿವೆ. ಇದನ್ನು ತಪ್ಪಿಸುವುದಕ್ಕಾಗುತ್ತಿಲ್ಲ.